ಈ) ಈ ಕಾರ್ಡುಗಳಿಗೆ ವಿತರಿಸಲು ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳು ದೊರಕುತ್ತಿದೆಯೇ ;

ಉ) ಈ ಕಾರ್ಡುಗಳಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲು ರಾಜ್ಯ ಸರ್ಕಾರ ಕೇಂದ್ರವನ್ನು ಕೋರಿದೆಯೇ ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಹೌದು ಡಿಸೆಂಬರ್ 2002 ತಿಂಗಳಲ್ಲಿದ್ದಂತೆ ಪಡಿತರ ಚೀಟಿಗಳ ವಿವರ

ಹಳದಿ ಪಡಿತರ ಚೀಟಿಗಳು	1,37,759
ಹಸಿರು ಪಡಿತರ ಚೀಟಿಗಳು	55,640
ಒಟ್ಟು	1,93,399

ಆ) ಹೌದು

ಇ) ಸರಾಸರಿ ಪ್ರತಿ ತಿಂಗಳು ಬೇಕಾಗಿರುವ ಆಹಾರಧಾನ್ಯ ಮತ್ತು ಸೀಮೆಎಣ್ಣೆ ಪ್ರಮಾಣ ವಿವರ ಈ ಕೆಳಕಂಡಂತೆ ಇರುತ್ತದೆ.

1.	ಅಕ್ಕಿ	5415 ಮೆಟ್ರಿಕ್ ಟನ್
2.	ಗೋಧಿ	1354 ಮೆಟ್ರಿಕ್ ಟನ್
3.	ಸೀಮೆಎಣ್ಣೆ	1934 ಕೆ.ಎಲ್.

ಅಕ್ಕಿಗೆ ಬೇಕಾಗಿರುವ ಸಹಾಯ ಧನ	ರೂ. 72.95.429.00
ಗೋಧಿಗೆ ಬೇಕಾಗಿರುವ ಸಹಾಯ ಧನ	ರೂ. 12,79,104.00
ಒಟ್ಟು	ರೂ. 85,74,533.00

ಪಡಿತರ ಚೀಟಿದಾರರಿಂದ ಸಂಪೂರ್ಣವಾದ ಹಂಚಿಕೆಯನ್ನು ಎತ್ತುವಳಿ ಮಾಡದೇ ಇರುವುದರಿಂದ ಮತ್ತು ರಾಜ್ಯದ ಬೇರೆ ಜಿಲ್ಲೆಗಳು ಅದ್ಯರ್ಪಣ ಮಾಡುತ್ತಿರುವ ಬಿಪಿಎಲ್ ಹಂಚಿಕೆಯನ್ನು ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶಕ್ಕೆ ಮರು ಹಂಚಿಕೆ ಮಾಡುತ್ತಿರುವುದರಿಂದ ಮೇಲ್ಕಾಣಿಸಿದ ಸಹಾಯಧನವು ಸಂಪೂರ್ಣವಾಗಿ ಉಪಯೋಗವಾಗಿರುವುದಿಲ್ಲ.

ಕಳೆದ 11 ತಿಂಗಳಲ್ಲಿ ಅಕ್ಕಿ ಮತ್ತು ಗೋಧಿಗೆ ಸರಾಸರಿ 29.97 ಲಕ್ಷಗಳು ಮಾತ್ರ ಸಹಾಯಧನವಾಗಿ ಖರ್ಚು ಆಗಿರುತ್ತದೆ.

ಸೀಮೆಎಣ್ಣೆ ಹಂಚಿಕೆಯಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಹೊರೆ ಇರುವುದಿಲ್ಲ.

ಈ) ಹೌದು

ಉ) ಇಲ್ಲ

ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ಲೆಕ್ಕಪತ್ರಗಳನ್ನು ಖಾಸಗೀಯವರಿಂದ ಆಡಿಟ್ ಮಾಡುವ ಬಗ್ಗೆ

1665 (2111) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) - ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿಗೆ ನಬಾರ್ಡ್ ರೀಫೈನಾನ್ಸ್ ಮಾಡುತ್ತಿರುವುದು ನಿಜವಲ್ಲವೆ ;

ಅ) ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ಸಹಕಾರ ಬ್ಯಾಂಕುಗಳ ಲೆಕ್ಕಪತ್ರಗಳನ್ನು ಸರ್ಕಾರದ ಸಹಕಾರ ಇಲಾಖೆ ಆಡಿಟ್ ಮಾಡುತ್ತಿರುವುದು ನಿಜವಲ್ಲವೆ ;

ಆ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಲೆಕ್ಕಪತ್ರಗಳ ತಪಾಸಣೆಯನ್ನು ಖಾಸಗೀ ಆಡಿಟರ್‌ಗಳಿಂದ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಇದಕ್ಕೆ ಸರ್ಕಾರ ಅನುಮತಿ ನೀಡಿದೆಯೇ ;

ಉ) ಸರ್ಕಾರದ ಹಾಗೂ ಸಾರ್ವಜನಿಕರ ಹಣ ಈ ಬ್ಯಾಂಕಿನಲ್ಲಿ ಹೂಡಿಕೆಯಾಗಿರುವುದರಿಂದ, ಸರ್ಕಾರದಿಂದಲೇ ಈ ಬ್ಯಾಂಕಿನ ಲೆಕ್ಕಪತ್ರಗಳ ತಪಾಸಣೆಗೆ ಸರ್ಕಾರ ಆದೇಶಿಸುತ್ತದೆಯೇ ?

ಶ್ರೀ ಎಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ನಿಜ

ಆ)ಇ)ಈ) ಹೌದು, ಚಾರ್ಡರ್ಡ್ ಲೆಕ್ಕಿಗರಿಂದ

ಉ) ಪರಿಶೀಲಿಸಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಬಿಡುಗಡೆ ಮಾಡಲಾದ ಬೆಳೆ ವಿಮೆ

1666 (1768) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) - ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಮೂರು ಸಾಲುಗಳಲ್ಲಿ ಬಿಡುಗಡೆ ಮಾಡಲಾದ ಬೆಳೆ ವಿಮೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು) ;

ಆ) ರೈತರು ನೀಡಿರುವ ವಂತಿಗೆ ಎಷ್ಟು ;

ಇ) ಬೆಳಗಾವಿ ಜಿಲ್ಲೆಯಲ್ಲಿ ರೈತರು ವಿಮೆ ಮಾಡಿಸಲು ಹಿಂದೇಟು ಹಾಕುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ರೈತರಿಗೆ ತಿಳುವಳಿಕೆ ಕೊಟ್ಟು ವಿಮೆ ಮಾಡಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) 2000-01 ಮತ್ತು 2001-02ನೇ ಸಾಲುಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ರೂ. 323.58 ಲಕ್ಷಗಳಷ್ಟು ಬೆಳೆ ವಿಮಾ ನಷ್ಟ ಪರಿಹಾರವಾಗಿ ರೈತರಿಗೆ ನೀಡಲಾಗಿದೆ. ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. 2002-03ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ನೀಡಲು ಇನ್ನೂ ಸ್ವಲ್ಪ ಕಾಲಾವಕಾಶ ಬೇಕಾಗಿರುತ್ತದೆ. ಏಕೆಂದರೆ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ಇಳುವರಿ ಮಾಹಿತಿಯನ್ನು ಭಾರತೀಯ ಸಾಮಾನ್ಯ ವಿಮಾ ನಿಗಮವು ಪರಿಶೀಲಿಸುತ್ತಿದೆ.

ಆ) 2000-01 ಮತ್ತು 2001-02ನೇ ಸಾಲುಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ರೈತರಿಂದ ವಿಮಾ ಕಂತಾಗಿ ಒಟ್ಟು ರೂ. 37.31 ಲಕ್ಷಗಳನ್ನು ಪಡೆಯಲಾಗಿದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ. ಆದಾಗ್ಯೂ ರೈತರಿಗೆ ಬೆಳೆ ವಿಮೆ ಯೋಜನೆಯ ಬಗ್ಗೆ ತಿಳುವಳಿಕೆ ನೀಡುವ ಸಲುವಾಗಿ ವ್ಯಾಪಕ ಪ್ರಚಾರವನ್ನು ಜಿಲ್ಲೆಯಲ್ಲಿ ಕೃಷಿ ಇಲಾಖೆ ಮತ್ತು ಕಂದಾಯ ಇಲಾಖೆಗಳು ದಿನಪತ್ರಿಕೆ, ಪೋಸ್ಟರು, ಕರಪತ್ರ ಹಾಗೂ ಸ್ಥಳೀಯ ಮಾಧ್ಯಮಗಳ ಮೂಲಕ ಕೈಗೊಂಡಿರುತ್ತಾರೆ.